ವಿಶ್ವವಾಣಿ

ಸಂಪಾದಕೀಯ

ದಲಿತ ಬಾಲಕನಿಗೆ ಬಹಿಷ್ಕಾರ ಖಂಡನೀಯ

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಉಳ್ಳೇರಹಳ್ಳಿಯ ಗ್ರಾಮ ದೇವತೆಯ ಮೆರವಣಿಗೆಯ ಸಂದರ್ಭದಲ್ಲಿ ದೇವತೆಯ ಗುಜ್ಜುಕೋಲು ಮುಟ್ಟಿದನೆಂಬ ಕಾರಣಕ್ಕೆ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಚೇತನ್ ಎಂಬ ಬಾಲಕನನ್ನು ಆ ಊರಿನ ಪ್ರಬಲ ಸಮುದಾಯಕ್ಕೆ ಸೇರಿದ ಕೆಲವರು ಹೊಡೆದಿರುವುದು ಮತ್ತು ಆತನ ಕುಟುಂಬಕ್ಕೆ ₹ 60 ಸಾವಿರ ದಂಡ ವಿಧಿಸಿ, ಬಹಿಷ್ಕಾರದ ಬೆದರಿಕೆ ಹಾಕಿರುವುದು ಖಂಡನೀಯ. ಬಸವಣ್ಣ, ಕನಕದಾಸ, ಕುವೆಂಪು ಅವರಂಥ ದಾರ್ಶನಿಕ ವ್ಯಕ್ತಿತ್ವವುಳ್ಳವರು ಹುಟ್ಟಿರುವ ನಮ್ಮ ಕನ್ನಡ ನಾಡಿನಲ್ಲಿ ಇಂಥ ಬಾಲಿಶ ಹಾಗೂ ಅಸಹನೀಯ ಘಟನೆಗಳು ಸಂಭವಿಸುತ್ತಿರುವುದು ಇಡೀ ನಾಗರಿಕ ಸಮುದಾಯವೇ ತಲೆ ತಗ್ಗಿಸುವಂತೆ ಮಾಡಿವೆ. ಮಕ್ಕಳನ್ನು ದೇವರ ರೂಪದಲ್ಲಿ ನೋಡುವ ಸಮಾಜದಲ್ಲಿ, ಬಾಲಕನೊಬ್ಬನ ಸ್ಪರ್ಶದಿಂದ ದೇವರಿಗೇ ಮೈಲಿಗೆಯಾಗುತ್ತದೆ ಎಂದು ನಂಬಿರುವ ಮನಸ್ಸುಗಳು ನಿಜಕ್ಕೂ ರೋಗಗ್ರಸ್ಥವಾಗಿವೆ. ಹಿರಿಯರಾದವರು ಮಕ್ಕಳ ಮನಸ್ಸಿನಲ್ಲಿ ಪ್ರೇಮ ಮತ್ತು ಸಹಬಾಳ್ವೆಗೆ ಅವಕಾಶವಿರುವ ಸಮಾಜದ ಚಿತ್ರಣವನ್ನು ಮೂಡಿಸಬೇಕೇ ಹೊರತು, ಒಡಕಿನ ಬಿಂಬಗಳನ್ನಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜಕ್ಕೆ ಅನಿಷ್ಟವಾದ ಆಚರಣೆಗಳಿಗೆ ಅವಕಾಶವಿಲ್ಲ. ಇಂತಹ ಶಕ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಬೇಕು. ಜತೆಗೆ, ಸಮಾಜವನ್ನು ಮಾನವೀಯಗೊಳಿಸುವ ಪ್ರಯತ್ನಗಳೂ ವ್ಯಾಪಕವಾಗಿ ನಡೆಯಬೇಕು. ಜಾತಿ ಶ್ರೇಷ್ಠತೆಯ ವ್ಯಸನಕ್ಕೊಳಗಾದವರು ಕಾನೂನನ್ನು ಕೈಗೆ ತೆಗೆದುಕೊಂಡು ದುರ್ಬಲ ವರ್ಗದವರ ಮೇಲೆ ದೌರ್ಜನ್ಯ ನಡೆಸುವ ಪ್ರಕರಣಗಳು ಕೊನೆಯಾಗಬೇಕು. ಸಾಮಾಜಿಕ ಬಹಿಷ್ಕಾರ ಹಾಕುವ ಹಾಗೂ ದಂಡ ವಿಧಿಸುವ ಸರ್ವಾಧಿಕಾರ ನಡೆಯನ್ನು ಯಾವ ಹಳ್ಳಿಗಳಲ್ಲೂ ಕೈಗೊಳ್ಳದಂತೆ ಪೊಲೀಸರು ಕ್ರಮ ವಹಿಸಬೇಕು. ಆ ಮೂಲಕ ಇಂಥ ನೀಚ ಕೃತ್ಯಗಳು ನಡೆಯದಂತೆ ಎಚ್ಚರ ವಹಿಸಬೇಕು. ವೈಜ್ಞಾನಿಕ, ವೈಚಾರಿಕ ಮನೋಭಾವವುಳ್ಳವರು ಗ್ರಾಮೀಣ ಪ್ರದೇಶಗಳಲ್ಲಿ ವೈಚಾರಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಜಾತೀಯತೆಯನ್ನು ಹೋಗಲಾಡಿಸುವ ಜಾಗೃತಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಶಾಲೆಗಳು ಮಕ್ಕಳ ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಬೇಕು. ಕುಡಿಯುವ ನೀರು, ಆಹಾರ, ಮಾಡುವ ವೃತ್ತಿ ಸೇರಿದಂತೆ ಬೇರೆ ಬೇರೆ ಸಂದರ್ಭಗಳಲ್ಲಿ ಜಾತಿಯನ್ನು ಹೆಸರಿಸಿ ಸಾರ್ವಜನಿಕವಾಗಿ ಅವಮಾನಿಸುವ ಘಟನೆಗಳು ಇನ್ನೆಂದೂ ಮರುಕಳಿಸದಂತೆ ನೋಡಿಕೊಳ್ಳಬೇಕು.

ಸೊಂಪಾದಕೀಯ

ವಾಸ್ತವ ಅವರ ಹಾಸ್ಯಪ್ರಜ್ಞೆ

ಹಾಸ್ಯ ವೇದಿಕೆಗಳಲ್ಲಿ, 'ಮಜಾಕ್ ಮಜಾಕ್ ಮೇ ಸಬ್ ಲೋಗ್ ಆಗಯೇ' ಅಂತಲೇ ಮಾತು ಶುರು ಮಾಡುತ್ತಿದ್ದ ಕಾಮಿಡಿ ಕಿಂಗ್ ರಾಜು ಶ್ರೀವಾಸ್ತವ್ 'ಮಜಾಕ್ ಮಜಾಕ್ ಮೇ ಚಲೇ ಗಯೇ' ಎನ್ನುತ್ತ ಬದುಕಿನ ವೇದಿಕೆಯಿಂದಲೇ ನಿರ್ಗಮಿಸಿದ್ದಾರೆ. ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸುತ್ತಿದ್ದ ರಾಜು, ಈಗ ಅವರ ಅಭಿಮಾನಿಗಳನ್ನು ಶೋಕಸಾಗರದಲ್ಲಿ ಮುಳುಗಿಸಿ ಹೋಗಿದ್ದಾರೆ.

ಸತ್ಯಪ್ರಕಾಶ್ ಶ್ರೀವಾಸ್ತವ್ ಅಂದ್ರೆ, ಯಾರಿಗೂ ಗೊತ್ತಾಗದೇ ಇರಬಹುದು. ಆದರೆ, ರಾಜು ಶ್ರೀವಾಸ್ತವ್ ಎಂಬ ಹೆಸರಿನಿಂದಲೇ ಕಾಮಿಡಿ ಶೋಗಳಲ್ಲಿ ಫೇಮಸ್ ಆಗಿದ್ದವರು ರಾಜು. ನಮಗೆ ರಾಜು ಎಂದಾಕ್ಷಣ ಅದರಲ್ಲೂ ಕಾಮಿಡಿ ಎಂದಾಕ್ಷಣ ನೆನಪಾಗುವ ಹೆಸರು ಮೇರಾ ನಾಮ್ ಜೋಕರ್‌ನ ರಾಜು. ಅಲ್ಲಿ ಸರ್ಕಸ್‌ನಲ್ಲಿ ನಗಿಸುವ ರಾಜು ಎಂಬ ಹೆಸರಿಟ್ಟುಕೊಂಡು, ಹೆಚ್ಚು ಸರ್ಕಸ್ ಮಾಡದೆಯೇ ಸುಲಭವಾಗಿ ಎಲ್ಲರನ್ನೂ ನಗಿಸುತ್ತಿದ್ದವರು ರಾಜು ಶ್ರೀವಾಸ್ತವ್. ಅಂದಿನ ಕಾಲದಲ್ಲಿ ಸಿನಿಮಾ, ಟಿವಿ ಧಾರಾವಾಹಿಯ ಕೆಲವು ಕಾಮಿಡಿ ಸೀರಿಯಲ್‌ಗಳನ್ನು ಬಿಟ್ಟರೆ ಬೇರೆಲ್ಲೂ ಕಾಮಿಡಿಯ ಟಚ್ ಸಿಗುತ್ತಿರಲಿಲ್ಲ. ಅಂತಹ ಕಾಲದಲ್ಲಿ ರಾಜು ಶ್ರೀವಾಸ್ತವ್, ಸೋನಿ ಟಿವಿಯ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜ್ ಶೋನಿಂದ ಪ್ರಚಲಿತರಾದರು. ಆ ಶೋನಿಂದ ಬೆಳಕಿಗೆ ಬಂದ ಹಲವು ಪ್ರತಿಭೆಗಳಲ್ಲಿ ರಾಜು ಪ್ರಮುಖರು. ತಮ್ಮ ಮಿಮಿಕ್ರಿ, ಕಂಟೆಂಟ್ ಮತ್ತು ಮಾತನಾಡುವ ಶೈಲಿ, ಆಂಗಿಕ ಭಾಷೆಗಳಿಂದ ರಾಜು ಬಹು ಬೇಗನೆ ಜನಪ್ರಿಯರಾದರು. ನಂತರ ಭಾರತದ ಪ್ರಮುಖ ಕಾಮಿಡಿಯನ್‌ಗಳಲ್ಲಿ ಒಬ್ಬರಾಗಿ ಕಾಮಿಡಿ ಪ್ರಪಂಚದಲ್ಲಿ ತಮ್ಮದೇ ಆದ ರಾಜ್ ನಡೆಸಿದ್ದರು ರಾಜು. 80ರ ದಶಕದಲ್ಲೇ ಬಾಲಿವುಡ್ ಚಿತ್ರಗಳಲ್ಲಿ ಕಾಮಿಡಿಯನ್ ಆಗಿ ಕಾಣಿಸಿಕೊಂಡಿದ್ದ ರಾಜು, ಮೈನೇ ಪ್ಯಾರ್ ಕಿಯಾ, ಬಾಜಿಗರ್ ಮುಂತಾದ ಸೂಪರ್ ಹಿಟ್ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕಾಮಿಡಿ ಹೆಸರಿನಲ್ಲಿ ಅಶ್ಲೀಲತೆಯ ವೈಭವೀಕರಣ ಮಾಡುವುದನ್ನು ವಿರೋಧಿಸುತ್ತಿದ್ದ ರಾಜು ಕ್ಲೀನ್ ಜೋಕ್‌ಗಳಿಗೆ ಹೆಸರಾಗಿದ್ದವರು. ತಮ್ಮ ವಿನೂತನ ಹಾಸ್ಯ ಪ್ರಜ್ಞೆಯಿಂದ ಎಲ್ಲರನ್ನೂ ಹೊಟ್ಟೆನೋವು ಬರುವಂತೆ ನಗಿಸುತ್ತಿದ್ದ ರಾಜು, ಇತ್ತೀಚೆಗೆ ಎದೆ ನೋವು ಅಂತ ಆಸ್ಪತ್ರೆ ಸೇರಿದವರು ಮತ್ತೆ ಅಲ್ಲಿಂದ ಜೀವಂತವಾಗಿ ಬರಲೇ ಇಲ್ಲ. ಆದರೆ, ಮೇರಾ ನಾಮ್ ರಾಜು ಎಂದು ಘಂಟಾಘೋಷವಾಗಿ ಜಗತ್ತಿನೆದುರು ಹೇಳುತ್ತ ಎಲ್ಲರನ್ನೂ ನಗಿಸುತ್ತಿದ್ದ ರಾಜು ಶ್ರೀವಾಸ್ತವ್, ಈಗ ತಮ್ಮ ಶೋ ಸಮಯ ಮುಗಿಯಿತು ಎಂದು ಎದ್ದು ಹೋಗಿದ್ದಾರೆ. ಜಗತ್ತನ್ನು ನಗಿಸುತ್ತಿದ್ದ ಈ ಜನಪ್ರಿಯ ಸ್ಟ್ಯಾಂಡ್ ಅಪ್ ಕಾಮಿಡಿಯನ್ ರಾಜು ಅವರಿಗೆ, ಇಂದು, ಒಂದು ಸ್ಟ್ಯಾಂಡಿಂಗ್ ಒವೇಷನ್ ನೀಡಿ ಅವರನ್ನು ಗೌರವಿಸೋಣ.

ಸಂಪಾದಕರ ಸದ್ಯಶೋಧನೆ

ಯಾರೊಂದಿಗೆ ಹೇಗೆ ಮಾತಾಡಬೇಕು?

ನಾವು ಯಾರೊಂದಿಗೆ ಮಾತಾಡುತ್ತೇವೋ ಅವರಿಗೆ ಅರ್ಥವಾಗುವಂತೆ ಮಾತಾಡಬೇಕು. ನಮ್ಮ ಮನಸ್ಸಿಗೆ ಬಂದ ಹಾಗೆ ಮಾತಾಡಿದರೆ ಅದು ಎದುರಿದ್ದವನಿಗೆ ಅರ್ಥವಾಗದಿದ್ದರೆ ಮಾತಾಡಿ ಪ್ರಯೋಜನ ಇಲ್ಲ. ಈ ಮಾತನ್ನು ಹೇಳುವಾಗ ನನಗೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮಹಾಪೌರರಾಗಿದ್ದ ಡಿ.ಕೆ.ಚೌಹಾಣ್ ನೆನಪಾಗುತ್ತಾರೆ. ನಿಮಗೆ ಗೊತ್ತಿರಬಹುದು, ಅವರು ಕಲಿತಿದ್ದು ಮೂರನೇ ಕ್ಲಾಸಿನವರೆಗೆ. ಬ್ರೆಡ್ ಮಾರಾಟ ಮಾಡಿ ಬಹಳ ಮೆಹನತ್ತಿನಿಂದ ಜೀವನದಲ್ಲಿ ಮೇಲೆ ಬಂದವರು. ಪಕ್ಷದ ಶಿಸ್ತಿನ ಸಿಪಾಯಿ. ಕೆಲವು ವರ್ಷಗಳ ಹಿಂದೆ, ಅವರು ಮೇಯರ್ ಆಗಿ ಆಯ್ಕೆಯಾದಾಗ, ತಮ್ಮ ನಾಯಕರಾದ ಪ್ರಹ್ಲಾದ ಜೋಶಿಯವರನ್ನು, ಸರ್, ಬುದ್ಧಿವಂತರನ್ನು ಸೇರಿಸಿ ಒಂದು ಕಾರ್ಯಕ್ರಮ ಮಾಡಬೇಕು ಅಂತ ನಿರ್ಧರಿಸಿದ್ದೇನೆ. ಯಾರನ್ನು ಕರೆಯಬೇಕು ಹೇಳಿ ಅಂದರು. ಅದಕ್ಕೆ ಜೋಶಿಯವರು ಅವರ ಕಾಲೆಳೆಯಲು, ಬುದ್ಧಿವಂತರು ಹುಬ್ಬಳ್ಳಿಯಲ್ಲಿ ಎಲ್ಲಿದ್ದಾರೆ? ಧಾರವಾಡದಲ್ಲಿ ಇರಬಹುದು ನೋಡಿ ಎಂದರು. ಧಾರವಾಡದಲ್ಲಿ ಅಂಥ ಬುದ್ಧಿವಂತರು ಯಾರಿದ್ದಾರೆ ಸಾರ್ ಎಂದು ಕೇಳಿದ್ದಕ್ಕೆ, ಜೋಶಿಯವರು ತಮಾಷೆಗೆ ಬೇಂದ್ರೆ ಇದ್ದಾರಲ್ಲ ಅಂದರು. ಸರಿ, ಚೌಹಾಣ್ ಅವರು ಬೇಂದ್ರೆಯವರನ್ನು ಆಮಂತ್ರಿಸಲು ನಿರ್ಧರಿಸಿದರು. ಸಾಧನಕೇರಿಯಲ್ಲಿ ಬೇಂದ್ರೆ ಮನೆಯ ಸನಿಹದಲ್ಲಿಯೇ ವಾಸವಾಗಿದ್ದ ಚಂದ್ರಕಾಂತ ಬೆಲ್ಲದ ಅವರನ್ನು ಸಂಪರ್ಕಿಸಿ, ಬೇಂದ್ರೆ ಅವರನ್ನು ಕಾರ್ಯಕ್ರಮಕ್ಕೆ ಕರೆಯಬೇಕಿತ್ತು, ನೀವು ಮಾತಾಡ್ರಿ ಎಂದರು. ಅದಕ್ಕೆ ಬೆಲ್ಲದ, ಬೇಂದ್ರೆ ಅವರು ಇಲ್ಲರೀ ಅಂದರು. ಹತ್ತು ದಿನ ಬಿಟ್ಟು ಚೌಹಾಣ್, ಪುನಃ ಬೆಲ್ಲದ ಅವರನ್ನು ಸಂಪರ್ಕಿಸಿ, ಬೇಂದ್ರೆ ಅವರನ್ನು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಕರೆಯಬೇಕೆಂದಿದ್ದೇನೆ, ನೀವು ಮಾತಾಡ್ರಿ ಅಂದರು. ಅದಕ್ಕೆ ಬೆಲ್ಲದ, ಬೇಂದ್ರೆ ಇಲ್ಲಾರೀ ಅಂದರು. ಸುಮಾರು ಹದಿನೈದು ದಿನಗಳ ನಂತರ ಬೆಲ್ಲದ ಅವರನ್ನು ಮತ್ತೊಮ್ಮೆ ಸಂಪರ್ಕಿಸಿದ ಚೌಹಾಣ್, ಬೇಂದ್ರೆ ಅವರನ್ನು ಆಮಂತ್ರಿಸಬೇಕಿತ್ತಲ್ಲ? ಎಂದಾಗ, ಬೆಲ್ಲದ ಅವರು ಪುನಃ ತಮ್ಮ ಎಂದಿನ ಧಾಟಿಯಲ್ಲಿ ಅವರು ಇಲ್ಲಾರೀ ಅಂದರು. ಸುಮಾರು ಇಪ್ಪತ್ತು ದಿನಗಳ ನಂತರ ಚೌಹಾಣ್ ಅವರಿಗೆ, ಬೇಂದ್ರೆ ಎಲ್ಲಿ ಹೋಗಿರಬಹುದು? ಕಳೆದ ಒಂದೂವರೆ ತಿಂಗಳಿನಿಂದ ಕೇಳಿದರೂ ಇಲ್ಲ ಇಲ್ಲ ಅಂತ ಹೇಳುತ್ತಿದ್ದಾರೆ. ವಿದೇಶಕ್ಕೆ ಹೋಗಿದ್ದರೂ ಈಗ ವಾಪಸ್ ಬಂದಿರಬಹುದು. ಇಂದು ಫೋನ್ ಮಾಡಿ ವಿಚಾರಿಸಿಯೇ ಬಿಡೋಣ, ಅವರನ್ನು ಆಮಂತ್ರಿಸುವ ಬಗ್ಗೆ ಅಂತಿಮ ನಿರ್ಣಯ ಮಾಡೋಣ ಎಂದು ಪುನಃ ಬೆಲ್ಲದ ಅವರಿಗೆ ಫೋನ್ ಮಾಡಿದರು. ಬೇಂದ್ರೆ ಅವರನ್ನು ಮುಖ್ಯ ಅತಿಥಿಯನ್ನಾಗಿ ಆಮಂತ್ರಿಸುವ ಬಗ್ಗೆ ನಿಮ್ಮ ಹತ್ತಿರ ಮಾತಾಡಿದ್ದೆ. ಅವರನ್ನು ಸಂಪರ್ಕಿಸಿ, ಅವರನ್ನು ಒಪ್ಪಿಸಿ ಎಂದು ವಿನಂತಿಸಿಕೊಂಡರು. ಆಗ ಬೆಲ್ಲದ ಅವರು, ಬೇಂದ್ರೆ ಎಲ್ಲಿದ್ದಾರ್ರೀ? ಅವರು ತೀರಿಕೊಂಡು ಬಹಳ ವರ್ಷಗಳಾದವು ಎಂದು ಹೇಳಿದರು. ಅದನ್ನು ಕೇಳಿಸಿಕೊಂಡ ಚೌಹಾಣ್ ಹೇಳಿದ್ದೇನು ಗೊತ್ತಾ? ಅಲ್ರೀ ಬೆಲ್ಲದ ಅವರೇ, ನಾನು ಮೂರು ತಿಂಗಳಿನಿಂದ ಬೇಂದ್ರೆ ಅವರನ್ನು ಆಮಂತ್ರಿಸುವ ಬಗ್ಗೆ ನಿಮ್ಮನ್ನು ಕೇಳುತ್ತಿದ್ದೇನೆ. ನೀವು ಅವರು ಇಲ್ಲ.. ಇಲ್ಲ... ಅಂತ ಹೇಳಿದಿರಿ. ಅವರೆಲ್ಲೋ ಬೇರೆ ಊರಿಗೆ ಹೋಗಿರಬಹುದು ಅಂತ ಭಾವಿಸಿದೆ. ಖಲ್ಲಾಸ್ ಆಗ್ಯಾರ ಅಂತ ಹೇಳಬಾರದೇನು? ನಾನು ಆಗ ಅವರನ್ನು ಕರೀರಿ ಅಂತ ನಿಮ್ಮ ಹತ್ರ ಹೇಳ್ತಾನೆ ಇರಲಿಲ್ಲ.

ಈಗ ಆರಂಭದ ಎರಡು ವಾಕ್ಯಗಳನ್ನು ಮತ್ತೊಮ್ಮೆ ಓದಿ.

'ನರ್ವ್ ಏಜೆಂಟ್' ಎಂಬ ಆಧುನಿಕ ಪರಮವಿಷ

ಶಿಶಿರ ಕಾಲ

ಶಿಶಿರ ಹೆಗಡೆ

shishirh@gmail.com

ಸರ್ಗೆ ಸ್ಕ್ರಿಪಾಲ್. ಆತನೊಬ್ಬ ಡಬಲ್ ಏಜೆಂಟ್/ಸ್ಪೈ. ಡಬಲ್ ಏಜೆಂಟ್ ಎಂದರೆ ಪರದೇಶದಲ್ಲಿದ್ದು ಬೇಹುಗಾರಿಕೆ ಮಾಡುತ್ತ, ಕ್ರಮೇಣ ಆ ಅನ್ಯದೇಶದ ಬೇಹುಗಾರಿಕಾ ಸಂಸ್ಥೆಯ ಜತೆಯೇ ಕೈಜೋಡಿಸುವವ. ಹಾಗಾದಾಗ ಆತನ ಮಾತೃದೇಶ ಹೇಗೆ ಬೇಹುಗಾರಿಕೆ ಮಾಡುತ್ತದೆ, ಯಾರ‍್ಯಾರು ಬೇಹುಗಾರರು ಎಂಬಿತ್ಯಾದಿ ವಿಷಯ ಬಯಲಾಗುತ್ತದೆ. ಇದು ಪ್ರತಿ ಬೇಹುಗಾರಿಕೆಯ ಭಾಗ. ಆತ ತನಗೋಸ್ಕರ ಪರದೇಶದಲ್ಲಿ ಬೇಹುಗಾರಿಕೆ ಮಾಡುತ್ತಿದ್ದಾನೆಂದೇ ಮಾತೃದೇಶ ಅಂದುಕೊಂಡಿರುತ್ತದೆ. ಆದರೆ ಆತ ಮಾತ್ರ ಆ ಪರದೇಶದ ಜತೆ ಕೆಲಸ ಮಾಡುತ್ತ ತನ್ನ ದೇಶದ ಕಣ್ಣಿಗೆ ಮಣ್ಣೆರಚುತ್ತಿರುತ್ತಾನೆ. ಹೆಚ್ಚಾಗಿ ಆತ ಪರದೇಶದಲ್ಲಿ ಸಿಕ್ಕಿಬಿದ್ದಾಗ ಜೀವ ಉಳಿಸಿಕೊಳ್ಳಲು ಅಥವಾ ಹಣಕ್ಕಾಗಿ ಇಂಥ ಕೆಲಸಕ್ಕೆ ಮುಂದಾಗುತ್ತಾನೆ. ಅಂಥವನು ಮಾತೃದೇಶಕ್ಕೆ ದ್ರೋಹಿ. ಶತ್ರುದೇಶಕ್ಕೆ ಸ್ನೇಹಿತ, ಹೀರೋ. ಸರ್ಗೆ ಇಂಗ್ಲೆಂಡಿಗೆ ಹೊಕ್ಕ ರಷ್ಯಾದ ಬೇಹುಗಾರ. ಆತ ಕೈಜೋಡಿಸಿದ್ದು ಅಮೆರಿಕ ಮತ್ತು ಇಂಗ್ಲೆಂಡಿನ ಜತೆ. ಇದು ಮುಂದೊಂದು ದಿನ ಪುಟಿನ್‌ಗೆ ತಿಳಿಯುತ್ತದೆ. 2004ರ ಒಂದು ದಿನ ಸರ್ಗೆ ಲಂಡನ್‌ನಿಂದ ರಷ್ಯಾಗೆ ಬಂದಿಳಿಯುತ್ತಿದ್ದಂತೆ ಪುಟಿನ್ ಆಡಳಿತ ಬಂಧಿಸುತ್ತದೆ. ಸರ್ಗೆ ಸಾಮಾನ್ಯ ಬೇಹುಗಾರನೇನಲ್ಲ, ರಷ್ಯಾದ ಮಿಲಿಟರಿಯಲ್ಲಿ ಕೆಲಸ ಕಲಿತವ. ಅವರಿಂದಲೇ ತರಬೇತಾಗಿ ನಂತರ ಇಂಗ್ಲೆಂಡಿಗೆ ಬೇಹುಗಾರನಾಗಿ ಒಳನುಸುಳಿದವ. ನಂತರ ಇಂಗ್ಲೆಂಡಿನ ಬೇಹುಗಾರಿಕಾ ಸಂಸ್ಥೆ ಎಂಐ6 ಜತೆ ಕೈಜೋಡಿಸುತ್ತಾನೆ, ಅದು ಹೇಗೋ ಪುಟಿನ್‌ಗೆ ತಿಳಿದುಬಿಡುತ್ತದೆ. ರಷ್ಯಾದಲ್ಲಿ ಆತನಿಗೆ ಜೈಲುಶಿಕ್ಷೆಯೂ ಆಗುತ್ತದೆ.

ಸುಮಾರು 6 ವರ್ಷ ಆತ ಬದುಕಿದ್ದಾನೋ ಇಲ್ಲವೋ ಎಂಬುದು ಹೊರಜಗತ್ತಿಗೆ ತಿಳಿಯುವುದೇ ಇಲ್ಲ. ಸಾಮಾನ್ಯವಾಗಿ ಹಾಗೆ ಸಿಕ್ಕಿಬಿದ್ದವರು ಮತ್ತೆಂದೂ ಹೊರಜಗತ್ತನ್ನು ನೋಡುವುದು ಅಸಾಧ್ಯ; ಅದರಲ್ಲೂ ರಷ್ಯಾದಲ್ಲಿ, ಇತ್ತ, ತನ್ನ ಮೇಲೆ ಬೇಹುಗಾರಿಕೆ ಮಾಡುತ್ತಿದ್ದ ಕೆಲವು ರಷ್ಯನ್ ಬೇಹುಗಾರರನ್ನು ಅಮೆರಿಕ ಬಂಧಿಸಿರುತ್ತದೆ. 2010ರಲ್ಲಿ ರಷ್ಯಾ-ಅಮೆರಿಕ ನಡುವೆ ಮಾತುಕತೆಯಾದಾಗ, ಹಾಗೆ ಬಂಧಿಸಿದ ಹತ್ತು ರಷ್ಯನ್ ಬೇಹುಗಾರರನ್ನು ಅಮೆರಿಕ ಬಿಡಬೇಕು, ಸರ್ಗೆ ಸೇರಿದಂತೆ ಇನ್ನು ಮೂವರನ್ನು ರಷ್ಯಾ ಬಿಡಬೇಕು ಎಂಬ ಒಡಂಬಡಿಕೆಯಾಗುತ್ತದೆ. ಇದನ್ನು 'ಸ್ಪೈ ಸ್ವಾಪ್' ಎನ್ನುತ್ತಾರೆ. ಇದು ಸಾಮಾನ್ಯವಾಗಿ ಶತ್ರುದೇಶಗಳ ನಡುವೆ ಆಗೀಗ ನಡೆಯುತ್ತಿರುತ್ತದೆ. ಹೀಗೆ ಬಿಡುಗಡೆಯಾದ ಸರ್ಗೆ ಇಂಗ್ಲೆಂಡಿಗೆ ಬಂದು ಬೇರೂರುತ್ತಾನೆ. ನಂತರವೂ ಆತ ಬ್ರಿಟಿಷ್ ಇಂಟೆಲಿಜೆನ್ಸ್ ಏಜೆನ್ಸಿಗಳ ಜತೆ ಕೆಲಸ ಮಾಡುತ್ತಿರುತ್ತಾನೆ. 2018ರ ಮಾರ್ಚ್‌ನಲ್ಲಿ ಸರ್ಗೆಯ ಮಗಳು ಯುಲಿಯಾ ತಂದೆಯನ್ನು ನೋಡಲು ರಷ್ಯಾದಿಂದ ಲಂಡನ್ನಿಗೆ ಬಂದಿರುತ್ತಾಳೆ. ಅವರಿಬ್ಬರು ಸಲಿಸ್ಬರಿ ನಗರದ ಮಾಲ್ ಒಂದರ ಹತ್ತಿರದ ರಸ್ತೆಬದಿಯ ಬೆಂಚಿನಲ್ಲಿ ಕೂತಿದ್ದಾಗ ಉಸಿರು ಕಟ್ಟಿದಂತಾಗಿ ಒದ್ದಾಡುವುದು ಅಲ್ಲಿ ಓಡಾಡುತ್ತಿರುವವರ ಗಮನಕ್ಕೆ ಬರುತ್ತದೆ. ಅವರಿಬ್ಬರ ಮೇಲೆ 'ನೋವಿಚೋಕ್' ಎಂಬ ಅತ್ಯಂತ ಬಲಶಾಲಿ ವಿಷದ ಪ್ರಯೋಗವಾಗಿರುತ್ತದೆ. ನಂತರ ಆತನ ಲಂಡನ್ ಮನೆಗೆ ಹೋದ ಡಿಟೆಕ್ಟಿವ್, ಆತನನ್ನು ಚಿಕಿತ್ಸೆ ಮಾಡಿದ ವೈದ್ಯರಿಗೂ ವಿಷ ತಗುಲಿ ಆರೋಗ್ಯ ವ್ಯತ್ಯಯವಾಗುತ್ತದೆ.

ನೋವಿಚೋಕ್ ಅತ್ಯಂತ ಪರಿಣಾಮಕಾರಿ ವಿಷ. ಸಲಿಸ್ಬರಿಯಲ್ಲಿ ಇಂಥ ವಿಷಪ್ರಯೋಗವಾಗಿದ್ದು ತಿಳಿಯುತ್ತಿದ್ದಂತೆ ಇಡೀ ಇಂಗ್ಲೆಂಡ್ ನಡುಗಿಹೋಗುತ್ತದೆ. ಕಾರಣ, ಬಣ್ಣ ಮತ್ತು ವಾಸನೆಯಿಲ್ಲದ ಈ ವಿಷ- ಕೇವಲ ಒಂದು ಚಮಚದಷ್ಟು ಸಾವಿರಕ್ಕೂ ಹೆಚ್ಚು ಮಂದಿಯನ್ನು ಕೊಲ್ಲಬಲ್ಲದು. ಹಾಗೇ ಬಿಟ್ಟರೆ ಸುಮಾರು 50 ವರ್ಷವಾದರೂ ಅದರ ವಿಷಗುಣ ಹಾಗೇ ಇರುತ್ತದೆ. ಇದನ್ನು ಪ್ರಯೋಗಿಸಿದ್ದು ಯಾರು? ಎಷ್ಟು ಪ್ರಮಾಣದಲ್ಲಿ ಇದನ್ನು ದೇಶದೊಳಕ್ಕೆ ಸ್ಮಗಲ್ ಮಾಡಿ ತರಲಾಗಿದೆ? ಹೀಗೆ ನೂರೆಂಟು ಪ್ರಶ್ನೆಗಳು. ಊರಿಗೆ ಊರೇ ಲಾಕ್‌ಡೌನ್ ಸ್ಥಿತಿ. ಇದು ಕೇವಲ ವಿಷವಲ್ಲ, ಜನಸಮೂಹವನ್ನೇ ಕೊಲ್ಲಬಹುದಾದ ಮಾಸ್ ಕೆಮಿಕಲ್ ಅಸ್ತ್ರ. ಸರ್ಗೆ ರಷ್ಯಾದ ವಿರೋಧಿ. ಅಲ್ಲದೆ ನೋವಿಚೋಕ್ ರಷ್ಯಾದಲ್ಲಿ 1970-80ರಲ್ಲಿ ಅಭಿವೃದ್ಧಿಪಡಿಸಲ್ಪಟ್ಟ ವಿಷ. ಹೀಗಾಗಿ ಇದು ರಷ್ಯಾದ್ದೇ ಕೆಲಸ ಎಂಬ ಹೇಳಿಕೆ ನೀಡುತ್ತಾರೆ ಅಂದಿನ ಇಂಗ್ಲೆಂಡ್ ಪ್ರಧಾನಿ ತೆರೇಸಾ ಮೇ.

ಇಷ್ಟಕ್ಕೇ ಮುಗಿಯುವುದಿಲ್ಲ, ಸರ್ಗೆ ವಾಸಿಸುತ್ತಿದ್ದ ಕಟ್ಟಡದ ಸುತ್ತ ಗೋಡೆ ಕಟ್ಟಲಾಗುತ್ತದೆ. ಅದನ್ನು ನೆಲಸಮ ಮಾಡಿದರೂ ಆ ವಿಷ ಅಲ್ಲಿದ್ದಿದ್ದರೆ ಅದನ್ನು ಮಾತ್ರ ನಾಶಮಾಡಲು ಸಾಧ್ಯವಿಲ್ಲ. ಬೆಂಕಿಯಿಟ್ಟು ಸುಟ್ಟರೆ ಗಾಳಿಯಲ್ಲಿ ಅದು ಸೇರಿಕೊಳ್ಳಬಹುದು. ಇದಾದ 3 ತಿಂಗಳ ನಂತರ ಇಂದಿನ ಇಂಗ್ಲೆಂಡ್ ಮಹಾರಾಜ, ಅಂದಿನ ರಾಜಕುಮಾರ ಚಾರ್ಲ್ಸ್ ಸಲಿಸ್ಬರಿ ನಗರಕ್ಕೆ ಭೇಟಿಯಿತ್ತು, ಈ ಊರು ವಾಸಯೋಗ್ಯ ಎಂಬಂತೆ ಪೋಸು ಕೊಟ್ಟು ಬರುತ್ತಾನೆ. ಇದಾದ ಐದೇ ದಿನದ ನಂತರ ಅಲ್ಲಿನ ನಾಗರಿಕನೊಬ್ಬನಿಗೆ ಪಾರ್ಕ್ ಒಂದರಲ್ಲಿ ತುಟ್ಟಿ ಬ್ರ್ಯಾಂಡ್‌ನ ಒಂದು ಸೆಂಟಿನ ಬಾಟಲಿ ಸಿಗುತ್ತದೆ. ಅದನ್ನಾತ ತನ್ನ ಗೆಳತಿಗೆ ನೀಡಿದಾಗ, ಆಕೆ ಮುಂಗೈಗೆ ಸೆಂಟ್ ಸಿಂಪಡಿಸಿಕೊಂಡು ಮೂಸುತ್ತಾಳೆ. ಅದರಲ್ಲಿ ಅದೇ ನೋವಿಚೋಕ್ ವಿಷವಿರುತ್ತದೆ. ಆಕೆ ಕೊನೆಯುಸಿರೆಳೆಯುತ್ತಾಳೆ. ಇದರಿಂದ ಇಡೀ ಸಲಿಸ್ಬರಿ ಮತ್ತು ಇಂಗ್ಲೆಂಡ್ ಇನ್ನೊಮ್ಮೆ ಧೃತಿಗೆಡುತ್ತವೆ. ಇದಾಗಿದ್ದೇ ತಡ, ಸುತ್ತಮುತ್ತಲ ನೂರಾರು ಮಂದಿ ಮನೆ ಖಾಲಿಮಾಡುತ್ತಾರೆ, ಇನ್ನೊಂದಿಷ್ಟು ಜನ ಆ ಊರನ್ನೇ ಬಿಟ್ಟುಹೋಗುತ್ತಾರೆ. ಹೀಗೆ 40 ಸಾವಿರ ಮಂದಿಯ ಜೀವನ ಒಮ್ಮಿಂದೊಮ್ಮೆಲೇ ಅಸ್ತವ್ಯಸ್ತ. ಸುಮಾರು 800 ಸೈನಿಕರು ಹಗಲು ರಾತ್ರಿ ಒಂದು ವರ್ಷದವರೆಗೆ ಸ್ವಚ್ಛಗೊಳಿಸಿದ ಮೇಲೆ ಸಲಿಸ್ಬರಿ ವಿಷಮುಕ್ತ ಎಂದು ಘೋಷಿಸಲ್ಪಡುತ್ತದೆ. ಕೆಲವೇ ಹನಿಗಳಷ್ಟು ವಿಷ ಒಂದು ನಗರ, ದೇಶ, ಸೈನ್ಯ, ವೈದ್ಯರು, ಪ್ರಜೆಗಳು, ಪ್ರಧಾನಿ, ಮಂತ್ರಿಗಳು ಹೀಗೆ ಎಲ್ಲರನ್ನೂ ಕಂಗಾಲು ಮಾಡಿಬಿಡುತ್ತದೆ.

ಈ ವಿಷವನ್ನು 'ನರ್ವ್ ಏಜೆಂಟ್' ಎನ್ನುತ್ತಾರೆ. ಇಂಥ ಅದೆಷ್ಟೋ ವಿಷಗಳನ್ನು ರಷ್ಯಾ, ಉತ್ತರ ಕೊರಿಯಾ ಮತ್ತು ಇರಾಕ್ ತಮ್ಮ ಅಸ್ತ್ರವಾಗಿಟ್ಟುಕೊಂಡಿದೆ ಎಂಬುದು ಪಾಶ್ಚಾತ್ಯ ಸರಕಾರಗಳ ದೂರು. ತಿರುಗಿಬಿದ್ದ ಅದೆಷ್ಟೋ ಬೇಹುಗಾರರನ್ನು, ಓಡಿಹೋದ ಬ್ಯುಸಿನೆಸ್ ಟೈಕೂನ್‌ಗಳನ್ನು ರಷ್ಯಾ ಅನ್ಯ ನೆಲದಲ್ಲಿ ಕೊಂದ ಉದಾಹರಣೆಗಳು ಬಹಳಷ್ಟಿವೆ. ಉತ್ತರ ಕೊರಿಯಾದ ಕಿಮ್ ಜಾಂಗ್ ಉನ್ ತನ್ನ ಅಣ್ಣನನ್ನು (ಮಲತಾಯಿಯ ಮಗ) ಮಲೇಷ್ಯಾದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೊಲ್ಲಿಸಲಿಕ್ಕೂ ಇಂಥದ್ದೊಂದು ನರ್ವ್ ಏಜೆಂಟನ್ನು ಬಳಸಿದ್ದು ನೀವು ಓದಿರಬಹುದು. ರಷ್ಯಾದ ಮಾಜಿ ಸೇನಾಧಿಕಾರಿ ಅಲೆಕ್ಸಾಂಡರ್ ಲಿಟ್ವಿನೆಂಕೋನ ಚಹಾದಲ್ಲಿ ಪೊಲೋನಿಯಮ್ ವಿಕಿರಣಕಾರಿ ವಸ್ತು ಸೇರಿಸಿ ಕೊಲ್ಲಲಾಗಿತ್ತು. ಹೀಗೆ ನರ್ವ್ ಏಜೆಂಟ್ ಬಳಸಿ ನಡೆದ ಕೊಲೆಗಳು ಸಾಕಷ್ಟಿವೆ.

ವಿಶ್ವವಾಣಿಯ ಆಗಸ್ಟ್ 31ರ ಸಂಚಿಕೆಯ ತಮ್ಮ ಅಂಕಣದಲ್ಲಿ ನಾ. ಸೋಮೇಶ್ವರ ಅವರು ಪ್ರಾಚೀನ ಕಾಲದಲ್ಲಿ ವಿಷಪ್ರಾಶನ ಹೇಗೆಲ್ಲ ನಡೆಯುತ್ತಿತ್ತು, ಭಾರತದಲ್ಲಿ ಎಲ್ಲೆಲ್ಲಿ ನಡೆಯಿತು ಎಂಬ ಬಗೆಗಿನ ಅದ್ಭುತ ವಿವರ ನೀಡಿದ್ದರು. ವಿಷ ತಯಾರಿಸಿ ಅದರಿಂದ ಕೊಲ್ಲುವ ಪದ್ಧತಿ ಬಹಳ ಹಿಂದಿನದು. ರೋಮನ್ನರ ಕಾಲದ ದಾಖಲೆಗಳಲ್ಲಿ, ರಾಮಾಯಣ-ಮಹಾಭಾರತದಲ್ಲಿ ಈ ಕುರಿತ ಉಲ್ಲೇಖಗಳಿವೆ. ಆದರೆ ಅವೆಲ್ಲ ಇಂದಿನಂತೆ ಆಧುನಿಕ ಲ್ಯಾಬ್‌ಗಳಲ್ಲಿ ತಯಾರಿಸಿದ, ಸಾವಿರಾರು ಜನರನ್ನು ಒಮ್ಮೆಲೇ ಕೊಲ್ಲಬಹುದಾದ ವಿಷಗಳಲ್ಲ. ಇಂದಿನ ಆಧುನಿಕ ನರ್ವ್ ಏಜೆಂಟ್‌ಗಳು ಅತ್ಯಂತ ವಿಷಕಾರಿ. ಆ ಕಾರಣಕ್ಕೆ ಅವನ್ನು ಸಾಗಿಸುವುದು, ಪ್ರಯೋಗಿಸುವುದು ಕೂಡ ಅಷ್ಟೇ ಕಷ್ಟದ ಕೆಲಸ. ನೋವಿಚೋಕ್ ಅನ್ನೇ ತೆಗೆದುಕೊಳ್ಳಿ. ಅದನ್ನು ಮೂಸಿ ಅಥವಾ ತಿಂದೇ ದೇಹದೊಳಕ್ಕೆ ಹೋಗಬೇಕೆಂದೇನಿಲ್ಲ, ಅದನ್ನು ಚರ್ಮದ ಮೇಲೆ ಹನಿಯ ಐವತ್ತು ಭಾಗದಲ್ಲಿ ಒಂದನ್ನು ತೆಗೆದು ಹಚ್ಚಿದರೆ ದೇಹದೊಳಕ್ಕೆ ಹೀರಲ್ಪಟ್ಟು ಸಾವು ಸಂಭವಿಸುತ್ತದೆ.

ಹಾಗಾದರೆ ಇಂಥ ಅದೆಷ್ಟು ಸಿಂಥೆಟಿಕ್ ವಿಷಗಳಿವೆ? ಅದನ್ನು ಮೊದಲು ತಯಾರಿಸುವ ಪ್ರಮೇಯ ಹೇಗೆ ಬಂತು? ಎಂಬ ಪ್ರಶ್ನೆಗಳು ಸಹಜ. ಮೊದಲ ನರ್ವ್ ಏಜೆಂಟ್ ತಯಾರಿಸಿದ್ದು ಜರ್ಮನಿಯವರು, 1934ರಲ್ಲಿ. ಮೊದಲ ಮಹಾಯುದ್ಧ ಮುಗಿದು ಎರಡನೆಯದರ ಹೊಸ್ತಿಲಲ್ಲಿದ್ದ ಸಮಯ. ಆಗ ಆಹಾರ ಕೊರತೆಯಿತ್ತು, ಕೀಟನಾಶಕದ ತೀವ್ರ ಅಗತ್ಯವಿತ್ತು. ಲ್ಯಾಬ್‌ನಲ್ಲಿ ನಾನಾರೀತಿಯ ಕೀಟನಾಶಕ ರಾಸಾಯನಿಕವನ್ನು ತಯಾರಿಸುವಾಗ ಟ್ಯೂಬನ್ ಎಂಬ ಘೋರವಿಷದ ಅವಿಷ್ಕಾರವಾಯಿತು. ಅರ್ಧ ಮಿಲಿಗ್ರಾಂ ಒಬ್ಬನನ್ನು ಕೊಲ್ಲುವಷ್ಟು ವಿಷ. ಆದರೆ ಜನರನ್ನು ಕೊಲ್ಲುವ ಹತ್ಯಾರವಾಗಿ ಜರ್ಮನಿ ಅದನ್ನು ಬಳಸಿದ್ದಿಲ್ಲ. ಏಕೆಂದರೆ ಅಂಥ ಹಿಕ್ಮತ್ತು ಆಗ ಅಷ್ಟು ಸುಲಭದ್ದಾಗಿರಲಿಲ್ಲ. ಅಲ್ಲಿಂದೀಚೆ ಅಮೆರಿಕ ಯುದ್ಧಕ್ಕೋಸ್ಕರ ಇಂಥದ್ದೊಂದಿಷ್ಟು ವಿಷಗಳನ್ನು ಲ್ಯಾಬ್‌ನಲ್ಲಿ ತಯಾರಿಸಲು ಶುರುವಿಟ್ಟುಕೊಂಡಿತು. ಇದು 1990ರವರೆಗೂ ಮುಂದುವರಿಯಿತು. ಇದರ ತಯಾರಿಕೆಗೆ ಬೇಕಾಗುವ ಕಚ್ಚಾ ರಾಸಾಯನಿಕದ ಪೂರೈಕೆಯನ್ನು ಕಂಪನಿಗಳು ನಿಲ್ಲಿಸಿದಮೇಲೆ ಮತ್ತು ನೈತಿಕ ಕಾರಣಗಳಿಂದ ಅಮೆರಿಕ ಈ ಕೆಲಸವನ್ನು ಇತ್ತೀಚೆಗೆ ಕೈಬಿಟ್ಟಿತು. ಆದರೆ ಲಕ್ಷಗಟ್ಟಲೆ ಜನರನ್ನು ಏಕಕಾಲಕ್ಕೆ ಕೊಲ್ಲಬಹುದಾದ ಇಂಥ ರಾಸಾಯನಿಕಗಳನ್ನು ಸದ್ದಾಂ ಹುಸೇನ್ ತಯಾರಿಸುತ್ತಲೇ ಇದ್ದ ಗುಮಾನಿಯಿತ್ತು. ಮುಂದೊಮ್ಮೆ ಇರಾಕಿನ ಮೇಲೆ ಅಮೆರಿಕ ದಂಡೆತ್ತಿ ಹೋಗಲು ಈ ಗುಮಾನಿಯೇ ಕಾರಣವಾಯಿತು. ಆದರೆ ಇರಾಕಿನಲ್ಲಿ ಅಂಥ ವಿಷಗಳ ಪ್ರಮಾಣ ಅಷ್ಟೇನೂ ಇರದಿದ್ದುದು ಬೇರೆ ವಿಷಯ. ಈಗ ರಷ್ಯಾ ಮತ್ತು ಉತ್ತರ ಕೊರಿಯಾ ಮಾತ್ರ ಇಂಥ ರಾಸಾಯನಿಕ ವಿಷವನ್ನು ತಯಾರಿಸುವ, ಬಳಸುವ ಕೆಲಸ ಮಾಡುತ್ತಿವೆ ಎಂಬುದು ಅಮೆರಿಕ ಮತ್ತು ಪಶ್ಚಿಮ ದೇಶಗಳ ತಕರಾರು. ಇಂಥ ಘಟನೆಗಳೂ ಈ ತಕರಾರಿಗೆ ಪುಷ್ಟಿ ನೀಡುತ್ತವೆ. ಪ್ರಸ್ತುತ ಇಂಥ ಸಮೂಹನಾಶಕ ವಿಷಗಳು ಯಾವ ದೇಶಗಳ ಬಳಿಯಿವೆ, ಯಾರಲ್ಲಿಲ್ಲ, ಯಾರು ಎಷ್ಟು ಸಂಭಾವಿತರು ಎಂದು ಗ್ರಹಿಸುವುದು ಕಷ್ಟ.

ಮೊದಲೇ ಹೇಳಿದಂತೆ ಇಂಥ ಮಹಾವಿಷವನ್ನು ನಾಶಮಾಡುವುದು ಸುಲಭದ ಕೆಲಸವಲ್ಲ. ಸುಡುವಂತಿಲ್ಲ, ಚೆಲ್ಲುವಂತಿಲ್ಲ, ಹಾಗೇ ಬಿಡುವಂತೆಯೂ ಇಲ್ಲ. ಹೀಗಾಗಿ ಅಣು ವಿದ್ಯುತ್ ಸ್ಥಾವರದಂಥ ದೊಡ್ಡ ಸೌಕರ್ಯದಲ್ಲಿ ಜಾಗರೂಕವಾಗಿ, ಪ್ರತಿರಾಸಾಯನಿಕಗಳನ್ನು ಬಳಸಿ ಇದನ್ನು ನಾಶಮಾಡಬೇಕು. ಇಲ್ಲವೇ, ಇದು ಹೊರಬಾರದಂತೆ, ತುಕ್ಕು ಹಿಡಿಯದ ಬಲಿಷ್ಠ ಲೋಹಪೆಟ್ಟಿಗೆಗಳಲ್ಲಿಟ್ಟು, ಸಮುದ್ರದಾಳಕ್ಕಿಳಿದು ಹುಗಿದು ಬರಬೇಕು. ಒಂದು ಚಮಚ ವಿಷ ಸಾವಿರ ಮಂದಿಯನ್ನು ಕೊಲ್ಲಬಹುದು ಎಂದೆನಲ್ಲ. GA, GB, VX, Tuban, Sarin, Soman ಹೀಗೆ 15 ಟನ್ನಿನಷ್ಟು ವೈವಿಧ್ಯಮಯ ನರ್ವ್ ಏಜೆಂಟ್‌ಗಳನ್ನು ಅಮೆರಿಕ 2020ರಲ್ಲಿ ನಾಶಮಾಡಿರುವುದು ಅದರ ಸೇನಾ ಜಾಲತಾಣದಲ್ಲಿ ನಮೂದಾಗಿದೆ. ಇದರರ್ಥ, ಇರಾಕಿನ ಮೇಲೆ ಅಮೆರಿಕ ಅದೇ ಕಾರಣಕ್ಕೆ ದಾಳಿ ಮಾಡುವಾಗ ಕೂಡ ತನ್ನಲ್ಲಿಯೇ ಇದೆಲ್ಲವನ್ನು ಇಟ್ಟುಕೊಂಡಿದ್ದುದು ಸ್ಪಷ್ಟವಾಗುತ್ತದೆ.

ಇಂಥ ಪರಮವಿಷಗಳ ತಯಾರಿಕೆ ಭಾರಿ ಕಷ್ಟದ ಕೆಲಸವೆಂದು ನೀವು ಅಂದುಕೊಂಡಿರಬಹುದು. ಆದರೆ, ಅಣ್ವಸ್ತ್ರಕ್ಕೆ ಹೋಲಿಸಿದರೆ ಇವುಗಳ ತಯಾರಿಕೆ ಅಂಥ ಕಷ್ಟವೇನಲ್ಲ. ಕಳೆದ ಮಾರ್ಚ್‌ನಲ್ಲಿ ಸುದ್ದಿಯೊಂದು ಅಮೆರಿಕದಲ್ಲಿ ಭಾರಿ ಸಂಚಲನ ಸೃಷ್ಟಿಸಿತ್ತು. ಔಷಧ ತಯಾರಿಯೆಂದರೆ ನೂರೆಂಟು ಪ್ರಯೋಗ ನಡೆಯಬೇಕು, ಜತೆಗೆ ಯಥೇಚ್ಛ ಖರ್ಚು ಕೂಡ. ಹೀಗಾಗಿ, ಮಾರಣಾಂತಿಕವಾದ ಆದರೆ ಅಷ್ಟಾಗಿ ಕಾಣಿಸಿಕೊಳ್ಳದ ಕೆಲವು ರೋಗಗಳಿಗೆ ಔಷಧ ಆವಿಷ್ಕರಿಸಲು ದೊಡ್ಡ ಕಂಪನಿಗಳು ಮುಂದಾಗುವುದಿಲ್ಲ. ಏಕೆಂದರೆ ಆವಿಷ್ಕಾರಕ್ಕೆ ತಗಲುವ ಖರ್ಚು ನಂತರ ಮಾರಾಟದಲ್ಲಿ ಹುಟ್ಟುವುದಿಲ್ಲ. ಆದರೆ ಇಂದು ಯಾವ್ಯಾವ ರಾಸಾಯನಿಕ ಮನುಷ್ಯನ ದೇಹದ ಮೇಲೆ ಹೇಗೆ ಹೇಗೆ ಪರಿಣಾಮ ಬೀರುತ್ತದೆ ಎನ್ನುವ ವಿಷಯ ಇಲೆಕ್ಟ್ರಾನಿಕ್ ಕಡತಗಳಲ್ಲಿ ಲಭ್ಯ. ಅಂಥ ಬೃಹತ್ ಕಡತಗಳನ್ನು ಇತ್ತೀಚೆಗೆ ತಂತ್ರಜ್ಞಾನ ಕಂಪನಿಯೊಂದು ಕೃತಕ ಬುದ್ಧಿಮತ್ತೆಯ ತಂತ್ರಾಂಶಕ್ಕೆ ನೀಡಿ, ತನ್ಮೂಲಕ ಇಂಥ ಅಪರೂಪದ ರೋಗಕ್ಕೆ ಸಾಧ್ಯವಿರುವ ಔಷಧಗಳನ್ನು ತಯಾರಿಸಲು ಮುಂದಾಗಿ, ಹಲವು ಅಪರೂಪದ ರೋಗಕ್ಕೆ ಕಡಿಮೆ ವೆಚ್ಚದಲ್ಲಿ ಕಂಪ್ಯೂಟರ್‌ನಲ್ಲೇ ಔಷಧ ಕಂಡುಹಿಡಿದು, ನಂತರ ಅದನ್ನು ಗಿನಿಪಿಗ್‌ಗಳು ಮತ್ತು ರೋಗಿಗಳ ಮೇಲೆ ಪ್ರಯೋಗಿಸಿ ಯಶಸ್ಸನ್ನೂ ಪಡೆಯಿತು. ಅದೇ ಕಂಪನಿಯ ಒಂದಿಷ್ಟು ಕಂಪ್ಯೂಟರ್ ತಜ್ಞರು ಔಷಧದ ಬದಲಿಗೆ, ಬಗೆಬಗೆಯಲ್ಲಿ ಸಾವುಂಟುಮಾಡಬಲ್ಲಂಥ (ಜೀವರಕ್ಷಣೆ ಬದಲಿಗೆ ಜೀವ ತೆಗೆಯುವ) ರಾಸಾಯನಿಕಗಳ ಕುರಿತು ಕಂಪ್ಯೂಟರ್‌ಗೆ ನಿರ್ದೇಶನ ನೀಡಿದಾಗ, ಅದರ ಪ್ರೋಗ್ರ್ಯಾಂ 6 ತಾಸು ಓಡಿದ ನಂತರ ಸುಮಾರು 40,000 ನರ್ವ್ ಏಜೆಂಟ್‌ಗಳ, ಪರಮವಿಷದ ತಯಾರಿಕೆ ಹೇಗೆನ್ನುವ ಬೃಹತ್ ಕಡತವನ್ನು ಪರದೆಯ ಮೇಲೆ ಮೂಡಿಸಿತು. ಜತೆಗೆ, ತೋರಿಸಿದ ಸಾಧ್ಯತೆಗಳ ರಾಸಾಯನಿಕವನ್ನು ಶಾಲಾ ಪ್ರಯೋಗಶಾಲೆಯಲ್ಲಿ ತಯಾರಿಸುವಷ್ಟು ಸುಲಭ ಮಾರ್ಗಗಳನ್ನೂ ಒದಗಿಸಿತ್ತು. ನಂತರದಲ್ಲಿ ಅದನ್ನು ಗೌಪ್ಯವಾಗಿ ನಾಶಮಾಡಲಾಯಿತಂತೆ. ಒಂದೊಮ್ಮೆ, ಅಡನಾಡಿ ದೇಶಗಳು ಇಂಥದ್ದೇ ಕೆಲಸ ಮಾಡಿದರೆ ಅಥವಾ ಇಂಥ ಕೃತಕ ಬುದ್ಧಿಮತ್ತೆಯ ತಂತ್ರಾಂಶ ಭಯೋತ್ಪಾದಕರಿಗೆ ಸಿಕ್ಕರೆ ಏನಾಗಬಹುದು?

ಇದು ಆಧುನಿಕ ಕಂಪ್ಯೂಟರಿನ ಸಾಮರ್ಥ್ಯವೆಂದು ಬೀಗುವುದಕ್ಕಿಂತ, ತಂತ್ರಜ್ಞಾನದ ಮಗ್ಗುಲಲ್ಲಿ ಏನೆಲ್ಲ ಸಾಧ್ಯ ಎಂಬುದು ಇಲ್ಲಿನ ಚರ್ಚಾವಿಷಯ. ಇಂಥ ನರ್ವ್ ಏಜೆಂಟ್‌ಗಳನ್ನು ಸಾಮೂಹಿಕವಾಗಿ ನಾಶಮಾಡಬೇಕು, ತಯಾರಿಸಬಾರದು ಎಂಬ ಒಡಂಬಡಿಕೆ ಮಾಡಿಕೊಂಡಿವೆ ಅಮೆರಿಕ, ಭಾರತ, ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯಾದಂಥ ದೊಡ್ಡದೇಶಗಳು. ಈ ನರ್ವ್ ಏಜೆಂಟ್‌ಗಳ ಕಾರ್ಯಸಾಧ್ಯತೆ ಇಷ್ಟು ಸುಲಭ ಮತ್ತು ವಿಪರೀತದ್ದಾಗಿರುವಾಗ, ಮುಂದೊಮ್ಮೆ ಏನು ಬೇಕಾದರೂ ಅನಾಚಾರವಾಗಬಹುದು. ಈ ಕಾರಣಕ್ಕೇ ರಾಸಾಯನಿಕ ಅಸ್ತ್ರವೆಂಬುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಗೀಗ ಸುದ್ದಿಯಾಗುತ್ತಿರುತ್ತದೆ. ಹಿಂದೆಯೂ ಇದು ಅದೆಷ್ಟೋ ಯುದ್ಧಗಳಿಗೆ ಕಾರಣವಾಗಿದೆ, ಮುಂದೆಯೂ ಆಗಬಹುದು. ಇದೆಲ್ಲ ನಾವೇ ಕಟ್ಟಿಕೊಂಡ ಆಧುನಿಕ ಜಗತ್ತಿನ ಭಾಗವೇ ಆಗಿದೆ ಎಂಬುದು ಇಲ್ಲಿನ ವಿಚಾರ.

ಮೌಸ್ಮಾಯಿ ಎಂಬ ಭೂ ಪದರದ ಒಳಗೆ...

ಅಲೆಮಾರಿಯ ಡೈರಿ

ಸಂತೋಷಕುಮಾರ ಮೆಹೆಂದಳೆ

mehandale100@gmail.com

ಬಹುಶಃ ಮನುಷ್ಯನಿಗೆ ಮನೆಗಳ ಕಲ್ಪನೆ ಬರಲು ಕಾರಣ ಅಲ್ಲಲ್ಲಿ ಎರಡು ಗುಡ್ಡಗಳ ಸಂದುಗಳಲ್ಲಿ ಆಸರೆಯಂಥ ಜಾಗ ಸಿಕ್ಕಿ ಅನಿರೀಕ್ಷಿತವಾಗಿ ಸಂಸಾರ ಎನ್ನುವ ಭಾವಕ್ಕೂ ಪಕ್ಕಾಗಿ, ಹಾಗಿದ್ದಾಗಲೇ ಕೋಶಕಾಂಡಗಳು ಬೇರಾಗಿ ಮೊರೆದು ಉತ್ಪತ್ತಿಯ ಮೂಲಕ್ಕೆ ತಿರುಗಲು ಕಾರಣವಾದದ್ದು ಕಾಲಾನುಕ್ರಮದಲ್ಲಿ ಇದನ್ನೆ ಗುಹೆ ಎಂದು ಕರೆದು ಅಲ್ಲಲ್ಲಿ ಅನುಕೂಲಕರ ಮತ್ತು ತಕ್ಕುದಾದ ಅರೆಗಳನ್ನು ಹುಡುಕಿಕೊಂಡು ಮನುಷ್ಯ ಭೂಮಿಯ ಚಹರೆ ಬದಲಿಸಲು ಯತ್ನಿಸಿದನಲ್ಲ, ಅದಕ್ಕಿಂತಲೂ ಪುರಾತನವಾದ ಪ್ರಕೃತಿಯ ರಚನೆ ಎಂದರೆ ಗುಹೆಗಳೇ. ಮನುಷ್ಯನಿಗೂ ಮೊದಲು ಪೂರ್ತಿ ಭೂಮಿಯ ಪರಿನಿರ್ಮಾಣದ ಮೊದಲ ಹೊಸ್ತಿಲಲ್ಲಿ ಹುಟ್ಟಿಕೊಂಡಿದ್ದೇ ಗುಹೆಗಳು. ಈಗಲೂ ಜಗತ್ತಿನ ಅತಿಹೆಚ್ಚು ಗುಹೆಗಳು, ಎರಡನೆಯ ಅತಿ ಉದ್ದದ ಗುಹೆ ಇರುವುದೆಲ್ಲಿ ಗೊತ್ತೆ? ಜಗತ್ತಿನಲ್ಲಿ 'ಗುಹೆ ಪ್ರವಾಸೋದ್ಯಮ' ಎಂದೇನಾದರೂ ಇದ್ದಿದ್ದೇ ಆದರೆ ಅದೆಲ್ಲಿ ಗೊತ್ತೆ? ಹೋಗಲಿ ನಿಮಗೆ ಗುಹೆಯಲ್ಲಿ ಬೋಟಿಂಗು, ಶೂಟಿಂಗು ಮತ್ತು ಲೈಟಿಂಗು ಮಾಡಿ ಕೂತು, ದುನಿ ಹಾಕಿಕೊಂಡು ಇದ್ದು ಬರಬೇಕೆ? ಅದಕ್ಕೂ ಸಾಧ್ಯತೆಗಳನ್ನು ಅನ್ವೇಷಿಸಿದ್ದಾರೆ ಗುಹೆಗಳ ಜತೆಗೆ ಎಲ್ಲಿ ಗೊತ್ತೇ? ನಮ್ಮ ದೇಶದ ಮೇಘಾಲಯ ಇವತ್ತು ಗುಹೆಗಳ ತವರೂರು.

ಅನಾಮತ್ತಾಗಿ 1800ಕ್ಕೂ ಹೆಚ್ಚು ಗುಹೆಗಳಿರುವ ಏಕೈಕ ರಾಜ್ಯ ಮತ್ತು ಜಗತ್ತಿನ ಅತಿಹೆಚ್ಚು ಪತ್ತೆಯಾದ, ಪತ್ತೆಯಾಗದೆ ಉಳಿದ ಗುಹೆಗಳ ಸಾಲಿನಲ್ಲಿ ಮೇಘಾಲಯ ಮೊದಲ ಸಾಲಿನಲ್ಲಿದೆ. ಇವತ್ತು ಇಲ್ಲಿ ಪ್ರವಾಸೋದ್ಯಮ ಇದ್ದಿದ್ದೇ ಆದರೆ, ಮಳೆಕಾಡಿನ ಆಕರ್ಷಣೆ ಕಳೆದುಕೊಂಡ ನಂತರವೂ ಉಳಿದಿದ್ದೇನಾದರೂ ಇದ್ದರೆ ಅದಕ್ಕೆ ಕಾರಣ ಗುಹಾಪ್ರವಾಸ.

ಹೌದು. ಚಿರಾಪುಂಜಿಯ ಮಳೆಕಾಡಿನ ಹೊರತಾಗಿ ಮೌಸನ್ರ್ಯಾಮ್ (ಹಿಂದೊಮ್ಮೆ ಈ ಬಗ್ಗೆ ಉಲ್ಲೇಖಿಸಿದ್ದೆ. ಇದನ್ನು ಜಗತ್ತಿನ ಒದ್ದೆ ಮರುಭೂಮಿ ಎನ್ನುತ್ತಾರೆ) ಜಾಗತಿಕವಾಗಿ ಮಳೆ ಬೀಳುವುದೆಲ್ಲ ತನ್ನದೇ ಸೊತ್ತು ಎಂದು ಗುರುತಿಸಿಕೊಂಡಿತಲ್ಲ, ಆಗಲೇ ಜನರ ಗಮನ ಈ ಮೌಸನ್ರ್ಯಾಮ್‌ಗೂ ಮಿಗಿಲಾಗಿ ಡಬಲ್ ಡೆಕ್ಕರ್ ತೂಗುಸೇತುವೆ ಕಡೆಗೂ ಹರಿದಿತ್ತಲ್ಲ, ಅಲ್ಲೆಲ್ಲ ಹಾಗೆ ಜನವಸತಿ ಇಲ್ಲದೆಯೂ ಬಳಕೆಗೆ ಲಭ್ಯವಾಗುತ್ತಿದ್ದ ಕನಿಷ್ಠ ಐದಾರು ದಶಕ ಬೇಡುವ ತೂಗುಸೇತುವೆಗಳು ನೈಜವಾಗಿ ಬೆಳೆದಿದ್ದುವಲ್ಲ, ಅದರ ಹಿಂದೆ ಬಿದ್ದ ಮೇಘಾಲಯ ಪ್ರಾಧಿಕಾರಕ್ಕೆ ದೊರಕಿದ್ದೆ ಈ ಗುಹಾ ಪ್ರವಾಸೋದ್ಯಮ. ಹಾಗಂತ ಇದೆಲ್ಲ ಆಗಲೇ ಹೊಳೆದದ್ದೇನಲ್ಲ, ಕಾಲಕ್ರಮೇಣ ಕೈಕಾಲು ಆಡಿಸಿದಲ್ಲೆಲ್ಲ ಜೈಂತಿಯಾ ಜಿಲ್ಲೆಯ ಪರ್ವತ ಬೆಟ್ಟಗಳೆಲ್ಲವೂ ಗುಹೆಯ ಒಡಲೇ ಆದಾಗ. ಎಲ್ಲೆಂದರಲ್ಲಿ ನೈಜವಾಗಿ ನಿರ್ಮಿತವಾಗಿರುವ, ಮನುಷ್ಯ ಸಹಜ ಕುತೂಹಲಕ್ಕೆ ಕಾರಣವಾಗಿ ತೆರೆದುಕೊಳ್ಳಬಹುದಾದ ಈ ಗುಹಾಸಮೂಹಗಳನ್ನು ಮೇಘಾಲಯ ಎಡ್ವೆಂಚರ್ಸ್ ಅಸೋಸಿಯೇಷನ್ ಮತ್ತು ಮೇಘಾಲಯ ಕೇವ್ಸ್ ಅಸೋಸಿಯೇಷನ್ ಇತ್ಯಾದಿಗಳು ಅನ್ವೇಷಣೆಯ ದಾರಿಗೆ ತಂದವು ಮೊದಲ ಬಾರಿಗೆ. ಆಗ ರಂಗಕ್ಕಿಳಿದಾಗ ದಕ್ಕಿದ ಸಾಲುಸಾಲು ಗುಹೆಗಳು ಒಂದೆರಡಲ್ಲ, ಬರೀ ಬಾಗಿಲವರೆಗೆ ಹೋಗಿ ತಲುಪಿರುವ ಸಂಖ್ಯೆ ಅನಾಮತ್ತು 1600 ಚಿಲ್ರೆ. ಅದರಲ್ಲಿ ಮನುಷ್ಯ ಯಾವುದೇ ಭೀತಿಯಿಲ್ಲದೆ ಅಪಾಯವಿಲ್ಲದೆ ಒಳಹೋಗಿ ಅದ್ಭುತ ಪ್ರಕೃತಿ ರಚನೆಗಳನ್ನು ನೋಡಿ ಬರಬಹುದಾದ ಲೆಕ್ಕಕ್ಕೆ ಸಿಕ್ಕಿರುವ ಈ ಒಳವಲಯದ ಸಂಖ್ಯೆ 980ಕ್ಕೂ ಹೆಚ್ಚು. ಇದೇ ಮುಂದೆ ಸಾಹಸ ಪ್ರವಾಸೋದ್ಯಮಕ್ಕೆ ದಾರಿಯಾಗುವುದರೊಂದಿಗೆ ಜಾಗತಿಕವಾಗಿ ಗುಹೆ ಅನ್ವೇಷಣೆ ಪ್ರಾಧಿಕಾರದ ಸೊತ್ತಾಗಿ ಹೆಚ್ಚಿನವು ಈಗ ಸರಕಾರದ ನಿಗಾವಣೆಯಲ್ಲಿವೆ.

ನೆನಪಿರಲಿ ಅನಾಮತ್ತು ಮೈಲುಗಟ್ಟಲೆ ದೂರದವರೆಗೆ ಸಲೀಸಾಗಿ ನಡೆದುಕೊಂಡು ಹೋಗಬಹುದಾದ ಗುಹೆಗಳು ಲೆಕ್ಕದ ಹೊರಗಿವೆ. ಇವತ್ತು ಮೇಘಾಲಯ ಖೋರಾ ಕೇವ್ಸ್ ಸರಣಿ ಜಗತ್ತಿನಲ್ಲಿ 2ನೇ ಸ್ಥಾನದಲ್ಲಿದೆ. 1884ರಲ್ಲಿ ಮೊದಲ ಬಾರಿಗೆ ಇಲ್ಲಿನ ಒಳನಾಡಿಗೆ ಕಾಲಿಟ್ಟ ಬ್ರಿಟಿಷ್ ಅಧಿಕಾರಿ ಎಲ್ವೀಯೂಲ್ ಸತತವಾಗಿ 7 ದಿನ ಕುದುರೆ ಸವಾರಿ ಮಾಡಿಕೊಂಡು ಬಂದು ನಿಂತಾಗ ಸಿಕ್ಕಿದ್ದು ಮೌವಾಯ್ ಕೇವ್ಸ್ ಸರಣಿ. ಅಲ್ಲಿಂದ ಶುರುವಾಯಿತು ನೋಡಿ ಈ ಹೊಸ ಅವಿಷ್ಕಾರದ ರುಚಿ. ಅಲ್ಲಿಂದೀಚೆಗೆ ಇವತ್ತಿನವರೆಗೂ ಹೊಸಹೊಸ ಗುಹೆಗಳನ್ನು ಗುರುತಿಸಿ ಅದರ ಅಪಾಯ, ಪ್ರವೇಶ, ಸುರಕ್ಷತೆ, ಆಳ, ಅಗಲ, ಬಾಯಿಯ ಪ್ರವೇಶಿಕೆಯ ನಿರ್ಧಾರ ಮಾಡಲಾಗುತ್ತಿದೆ. ಕೆಲವು ಗುಹೆಗಳ ಪ್ರವೇಶ ಅಕ್ಷರಶಃ ಬಾವಿಯಲ್ಲಿ ಇಳಿದಂತೆ ಇರುತ್ತದೆ. ಅದನ್ನು ಮೊದಲಿಗೆ ಅಂಥ ಅಪಾಯ ಎದುರಿಸಿ ಒಳಗೆ ಪ್ರವೇಶ ಮಾಡಲೇಬೇಕೆನ್ನುವಷ್ಟು ಅದ್ಭುತತೆ ಇದ್ದರೆ, ಅದಕ್ಕಾಗಿ ಆ ಬಾವಿಯ ಬಾಯನ್ನು ಸರಿಪಡಿಸಿ ಇಳಿಯಲು ಅನುಕೂಲವಾಗುವಂತೆ ಮೆಟಲ್ ರೋಪ್‌ಗಳು ಅಲ್ಲಲ್ಲಿ ಕಾಲೂರಲು ಹಿಡಿಮೆಟ್ಟಿಲುಗಳನ್ನು ನಿರ್ಮಿಸಿ ಆಮೇಲೆ ಎಲ್ಲಿಯವರೆಗೆ ಸಾಮಾನ್ಯ ಮಾನವ ಪ್ರವೇಶಕ್ಕೆ ಅನುಕೂಲ ಮತ್ತು ಅಪಾಯರಹಿತ ಮಾಡಲು ಸಾಧ್ಯ ಎಂದು ಲೆಕ್ಕಿಸಲಾಗುತ್ತದೆ. ಯಾವ ಲೆಕ್ಕದಲ್ಲೂ ಉದುರಿ ಬೀಳದ, ನೆಲ ಕುಸಿಯದ, ಪಕ್ಕದ ಗೋಡೆಗಳು ಅದುರಿ ಅಪಾಯ ಆಗದ, ಶಿಲಾರಚನೆಗಳು ಧಕ್ಕೆಯಾಗದ ರೀತಿಯ ಪ್ರವೇಶ, ಬೆಳಕು, ಆಮ್ಲಜನಕ ಪ್ರಮಾಣ, ಆಳ, ಉದ್ದದ ಪರಿಧಿ, ಇವೆಲ್ಲ ಮಾನದಂಡ ಹಾಗೂ ವ್ಯವಸ್ಥೆಯ ಮೇಲೆ ಒಂದು ಗುಹೆಯ ಸಿದ್ಧತೆ ಮುಗಿಯುತ್ತದೆ. ಮಿನಿಮಮ್ ಮಾದರಿ ಗುಹೆಯ ರೂಪಕ್ಕೆ ಅದರ ಗುಣಲಕ್ಷಣ ಹೊಂದಿಕೆಯಾದ ಮೇಲೆ ಅದಕ್ಕೊಂದು ನಂಬರ್ ಮತ್ತು ಹೆಸರು ಬೀಳುತ್ತದೆ. ಬರೀ ಪ್ರವಾಸ ಮಾತ್ರವಲ್ಲ ಈ ಕೆಲಸದಲ್ಲೂ ನೀವು ಪಾಲ್ಗೊಳ್ಳಬಹುದು. ನಿರಂತರ ಅನ್ವೇಷಣೆ ಈಗಲೂ ಮೇಘಾಲಯದಲ್ಲಿ ಜಾರಿಯಿದ್ದು ಇನ್ನೂ ಖಾಸಿ ಹಿಲ್ಸ್ ಸರಣಿಯ ಎಣಿಕೆಯೇ ಮುಗಿದಿಲ್ಲ. ಅಷ್ಟೊಂದು ನಿಸರ್ಗ ನಿರ್ಮಿತ ಈ ರೀತಿಯ ವಿಭಿನ್ನ ಮತ್ತು ಅಪರೂಪದ ಗುಹೆಗಳ ಉದ್ದದ ಸರಣಿ ಕೆಲವೊಮ್ಮೆ ಒಂದು ಕಡೆಯಿಂದ ಆರಂಭವಾಗಿ ಇನ್ನೊಂದು ಕಡೆಯಿಂದ ಹೊರಕ್ಕೆ ಬರುವ ಮೂಲಕ ಮುಕ್ತಾಯವಾಗುವುದೂ ಇದೆ.

ನಾನು ಮೌಸ್ಮಾಯಿ ಗುಹೆಯ ಭೇಟಿಯಲ್ಲಿ ಅಗಾಧ ಎತ್ತರದ ಪ್ರವೇಶಿಕೆಯ ಮೂಲಕ ಒಳಬಂದಿದ್ದೆ. ಆದರೆ ನಂತರದಲ್ಲಿ ಅಚಾನಕ್ ಆಗಿ ಬಾಯಿ ಕಿರಿದಾಗಿಸಿಕೊಳ್ಳುವ ಇದು ಒಳಗೆ ನೀರಿನ ನಿರಂತರ ಒರತೆ ಮತ್ತು ಹರಿಯುವಿಕೆಯನ್ನು ಹೊಂದಿದೆ. ತೀರ ಕೆಲವೆಡೆಗೆ ಒಳಗೆ ದಾರಿ ಕುಳಿತು ತೆವಳಿ ಹೋಗುವಷ್ಟು ಕಿರಿದಾಗಿ ಮತ್ತೆ ಅಗಲವಾಗುತ್ತದೆ. ಅಲ್ಲದೆ ಖಂಡಿತ ಎಷ್ಟೇ ಹುಷಾರಿನಿಂದ ಜರುಗುತ್ತಿದ್ದರೂ ಮೊಳಕೈ, ಭುಜ, ತಲೆ ಅಲ್ಲಲ್ಲಿ ಢಿಕ್ಕಿ ಹೊಡೆಯುವುದು ಶತಸ್ಸಿದ್ಧ. ಪ್ರವೇಶಕ್ಕೂ ಮೊದಲೇ ಈ ಬಗ್ಗೆ ಎಚ್ಚರಿಕೆ ಸಿಕ್ಕಿರುತ್ತದಾದರೂ ನಾವು ಹುಷಾರಾಗುವುದು ಮಾತ್ರ ಒಂದೆರಡು ಬಾರಿ ಸಟಕ್ಕನೆ ತಲೆಗೊ ಭುಜಕ್ಕೊ ಜಪ್ಪಿಕೊಂಡಾಗಲೇ. ಸಂಕೀರ್ಣವಾಗಿ ರಚಿತವಾಗಿರುವ ಇಂಥ ಗುಹೆಯನ್ನು ದರ್ಶಿಸುವಾಗ ಆದಷ್ಟೂ ಯಾವ ರೀತಿಯ ವಸ್ತುಗಳೂ ಜತೆಗಿರದಿದ್ದರೆ ಉತ್ತಮ. ಕ್ಯಾಮೆರಾ ಹೊರತುಪಡಿಸಿ ಮತ್ತು ಒಂದು ಸಣ್ಣ ಟಾರ್ಚ್ ಬಿಟ್ಟರೆ ಬಾಕಿ ಹೊರಗಿಡುವುದೇ ಕ್ಷೇಮ.

ಸಂಪೂರ್ಣ ಸುಣ್ಣದ ಕಲ್ಲಿನ ರಚನೆಗಳನ್ನು ಹೊಂದಿರುವ, ಅಲ್ಲಲ್ಲಿ ಶತಮಾನಗಳಿಂದ ಸೋರಿಕೆಗೆ ಸಿಕ್ಕು ಮೇಲ್ಛಾವಣಿಯಿಂದ ನೇತಾಡುವ ಕಲಾಕೃತಿಯಾಗಿ ರೂಪಗೊಂಡಿರುತ್ತದಲ್ಲ, ಅದಕ್ಕೆಲ್ಲ ವಿನ್ಯಾಸ ಎಂಬುವುದನ್ನು ವಿವರಿಸಲು ಸಾಧ್ಯವಿಲ್ಲ, ಯಾವ ಮಾರ್ವೆಲ್ ಎಂಜಿನಿಯರಿಂಗ್‌ಗೂ ಸವಾಲಾಗಬಲ್ಲ ಈ ನೈಜ ರಚನೆಗಳ ವಿನ್ಯಾಸ ಪ್ರತಿ ಕೋನದಲ್ಲೂ ಅದ್ಭುತವೇ. ಅದರಲ್ಲೂ ಹಾಗೆ ಮೇಲ್ಛಾವಣಿಯಿಂದ ನೆಲದವರೆಗೂ ಬಂದು, ಕ್ರಮೇಣ ಅಲ್ಲೆಲ್ಲ ರಚನೆಗೆ ಆಧಾರ ದೊರಕಿ ಬುಡವೆಲ್ಲ ಅಗಲ ಆಗಿ ಸ್ತಂಭಾಕಾರದಲ್ಲೂ, ಅದರ ಮೇಲೆಲ್ಲ ನುಣುಪು ವೃತ್ತಾಕಾರದ ವಿನ್ಯಾಸಭರಿತ ರಚನೆಗಳೂ ಕ್ರಮೇಣ ಮೈದೋರಿರುತ್ತವಲ್ಲ, ಅದರ ಜೌಗು ಮೈ ಸವರುವ ಅನುಭವಕ್ಕೆ ಪಕ್ಕಾಗಲಾದರೂ, ಒಮ್ಮೆ ಸುಮ್ಮನೆ ಮೇಘಾಲಯಕ್ಕೆ ಹೊರಡಬೇಕು ನೀವು.

ಶಿಲ್ಲಾಂಗ್‌ನಿಂದ 60 ಕಿ.ಮೀ. ದೂರದಲ್ಲಿ ಮೌಸ್ಮಾಯಿ ಗುಹೆಗಳ ಮೊದಲ ಸರಣಿ ಆರಂಭವಾಗುತ್ತದೆ. ಆಮೇಲೆ ಹೊರಟಂತೆ ಸಿಕ್ಕಿದ್ದನ್ನೆಲ್ಲ ಪ್ರವೇಶ ಮತ್ತು ಸಮಯ ಹೊಂದಿಸಿಕೊಳ್ಳುವ ನಿಮ್ಮ ಉಮೇದು ಮತ್ತು ಅಭೀಪ್ಸೆಯ ಮೇಲೆ ಎಷ್ಟು ನೋಡುತ್ತೀರಿ ನಿರ್ಧಾರವಾಗುತ್ತದೆ. ನೂರಾರು ಲೆಕ್ಕ ಹೋಗಿ ಸಾವಿರ ಲೆಕ್ಕದಲ್ಲಿ ಗುರುತಿಗೆ ಸಿಕ್ಕಿರುವ, ಗುರುತಿಸದಿರುವ ಇಷ್ಟು ದೊಡ್ಡಮಟ್ಟದ ರಚನೆಯಲ್ಲಿ ಕೆಲವು ಗುಹೆಗಳು ಒಳಗೊಳಗೆ ಒಂದಕ್ಕೊಂದು ಜೋಡಣೆಯಾಗಿದ್ದರೆ, ಕೆಲವಕ್ಕೆ ಕೇವಲ ಎರಡಡಿ ಬಾಯಿ ಇದ್ದು ಒಳಗೆ ಎರಡು ಮೂರಲ್ಲ 20 ಕಿ.ಮೀ. ಉದ್ದ ಅಗಾಧತೆ ಸಂದಿವೆ. ಗುಹೆಯಲ್ಲೂ ಏರ್‌ಬೋಟಿಂಗ್ ಈಗಿನ ಸಾಹಸಮಯ ಹವ್ಯಾಸ. ಹತ್ತಿಪ್ಪತ್ತು ಕಿ.ಮೀ.ನಿಂದ 2-3 ಕಿ.ಮೀ. ಉದ್ದದ ಗುಹೆಯಲ್ಲಿ ಅತ್ಯಂತ ಶುದ್ಧ ನೀರಿನಡಿಯ ಚಿತ್ರಣ ಕಾಣುವಷ್ಟು ಚೆಂದದ ನೀರಿನ ಮೇಲೆ ಏರ್ ಬೋಟಿಂಗ್ ಮಾಡಿಸಬಲ್ಲವರಿದ್ದಾರೆ. ಇದಕ್ಕೆಲ್ಲ ನೀವು ಸಮಯ ಇರಿಸಿಕೊಂಡು ಹೋದರೆ ಮಾತ್ರ ಸಾಧ್ಯ. ಇದೆಲ್ಲ ನೋಡುತ್ತಿದ್ದರೆ ದೇವ್ರಾಣೆ ನೀವು ಒಂದು ಕಾಲದ ಖ್ಯಾತ ಚಿತ್ರ 'ಮೆಕೆನ್ನಾಸ್ ಗೋಲ್ಡ್' ನೆನೆಸಿಕೊಳ್ಳುತ್ತೀರಿ, ಹಿಂದೆಯೆ ನೆನಪಾಗುವುದು 'ಇಂಡಿಯಾನ ಜೋನ್ಸ್' ಚಿತ್ರ. ಅದಕ್ಕಾಗಿ ಎಲ್ಲೆಲ್ಲೋ ತಿರುಗುವ ಬದಲಿಗೆ ಸುಮ್ಮನೆ 4 ಲೈಟುಗಳನ್ನೆತ್ತಿಕೊಂಡು ಹೀರೋಯಿನ್ ಜತೆಗೆ ಇಲ್ಲಿ ಇಳಿದಿದ್ದರೆ ಅದಕ್ಕಿಂತ ಅದ್ಭುತ ಚಿತ್ರ ಮಾಡಿಕೊಳ್ಳುತ್ತಿದ್ದರೇನೋ.

ಮೂಲತಃ ಭೂಮಿಯ ಪದರ ಬಾಯ್ಬಿಡುವಾಗ ಉಂಟಾದ ಅಪಾಯರಹಿತ ಬಿರುಕುಗಳೇ ಗುಹೆಗಳಾದುವೇ ಹೊರತಾಗಿ ಇವ್ಯಾವುವೂ ಮಾನವ ನಿರ್ಮಿತವಲ್ಲ. ಪುರಾತನ ಕಾಲದಲ್ಲೂ ಇಂಥದ್ದೆ ಅಡ್ಡ ಒರಗಿದ್ದ ಬಾಯ್ದೆರೆದ ಶಿಲಾಪದರದ ಅಡಿಗೆ ಆಶ್ರಯ ಪಡೆಯುತ್ತಿದ್ದ ಮಾನವ ಕ್ರಮೇಣ ಇವುಗಳನ್ನೆ ಆಶ್ರಯಿಸಿದ. ಹಿಮಾಲಯ ಶ್ರೇಣಿಗೆ ಹತ್ತಿರ ಮತ್ತು ಮೇಲ್ಭಾಗದಲ್ಲಿರುವ ಕಾರಣ ಯಾವಾಗೆಲ್ಲ ಭೂಮಿಯ ಸ್ತರಗಳು ಆಚೀಚೆ ಕದಲುತ್ತವೆಯೋ ಅಗೆಲ್ಲ ಇಂತಹ ರಚನೆಗಳು ಉದ್ಭವವಾಗುತ್ತವೆ. ಅಪಾಯರಹಿತವಾಗಿದ್ದರೆ ನಾವು ಲಕ್ಕಿ. ತಪ್ಪಿ ನಮ್ಮ ಹುಡುಗಾಟಕ್ಕೆ ಏನಾದರೂ ಆಗಿ ಒಂದು ಪದರ ಹಿಸಿದರೆ ಅವಲಕ್ಕಿ.. ಡೌಟೇ ಬೇಡ.

ಅಂದ ಹಾಗೆ, ಬೇರೇನೂ ವಸ್ತುಗಳ ಒಯ್ಯದಿರಿ ಎಂದೇನಲ್ಲ. ಕಾರಣ ಹಾಗೆ ಮೌಸ್ಮಾಯಿ ಗುಹೆ ಹೊಕ್ಕು ಹೊರಬಂದು 4 ತಾಸು ಡ್ರೈವ್ ಮುಗಿದ ಮೇಲೆ ಜೇಬಿಗೆ ಕೈಹಾಕಿ ನೋಡಿಕೊಂಡರೆ ನನ್ನ ಫೇವರಿಟ್ 'ರೇಬಾನ್' ಕನ್ನಡಕ ಗುಹೆಯ ಯಾವುದೋ ಸಂದಿನಲ್ಲಿ ಬಿದ್ದು ಹೋಗಿದೆ. ಅರೆಬರೆ ಬೆಳಕಿನ ಸಹವಾಸದಲ್ಲಿ ಇದು ಕಾಮನ್. ಅದಕ್ಕೆ ಜಾಗ್ರತೆ ಇರಲಿ ಎಂದಿದ್ದು. ಅಷ್ಟಕ್ಕೂ ಅಲೆಮಾರಿಯ ಅನುಭವದಲ್ಲಿ ಇದೆಲ್ಲ ಆಗುವಂಥದ್ದೇ ಬಿಡಿ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಸ್ಪೃಶ್ಯತೆಗೆ ಕೊನೆಯೆಂದು?

ಮಾಲೂರಿನಲ್ಲಿ ಗ್ರಾಮದೇವತೆಯ ಉತ್ಸವದ ವೇಳೆ ದೇವರ ಪಲ್ಲಕ್ಕಿ ಹೊತ್ತವರ ಪೈಕಿ ಒಬ್ಬರ ಗುಜ್ಜುಕೋಲು ಕೆಳಗೆ ಬಿದ್ದಾಗ, ಅದನ್ನು ಎತ್ತಿಕೊಟ್ಟು ಆ ವ್ಯಕ್ತಿಯನ್ನು ಮುಟ್ಟಿದ್ದಕ್ಕೆ ದಲಿತ ಬಾಲಕನೊಬ್ಬನಿಗೆ ದಂಡ ವಿಧಿಸಿರುವುದು ವರದಿಯಾಗಿದೆ. ಇದು ಅಮಾನವೀಯ ವರ್ತನೆಯಲ್ಲವೇ? ಸಂವಿಧಾನ ಜಾರಿಯಾಗಿ 7 ದಶಕಗಳಾದ್ದರೂ ಜಾತಿವ್ಯವಸ್ಥೆ ಬದಲಾಗಿಲ್ಲ, ಅಸ್ಪೃಶ್ಯತೆ ತೊಲಗಿಲ್ಲ ಎಂಬುದಕ್ಕೆ ಇದು ಜ್ವಲಂತಸಾಕ್ಷಿ.

ಇತ್ತೀಚೆಗೆ ಚಿತ್ರದುರ್ಗದಲ್ಲಿ 'ಹಿಂದೂ ಮಹಾಗಣಪತಿ ಶೋಭಾಯಾತ್ರೆ' ನಡೆಯುವಾಗ 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎಂಬ ಘೋಷಣೆ ಮೊಳಗುತ್ತಿತ್ತು. ಇದನ್ನೆಲ್ಲ ನೋಡಿದಾಗ, 'ಧರ್ಮದ ವಿಚಾರ ಬಂದಾಗ ಮಾತ್ರ ಅಸ್ಪೃಶ್ಯರು ಹಿಂದೂಗಳಾಗುತ್ತಾರೆ, ನಂತರ ಮತ್ತೆ ಅಸ್ಪೃಶ್ಯರಾಗುತ್ತಾರೆ' ಎಂಬ ಅಂಬೇಡ್ಕರ್ ಮಾತು ನಿಜವೆನ್ನಿಸಿತು. ಜಾತಿಯ ವಿಷಯಕ್ಕೆ ಶತಮಾನಗಳಿಂದ ಹೋರಾಟ ನಡೆಯುತ್ತಿದ್ದರೂ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯಂಥ ಪಿಡುಗುಗಳ ನಿರ್ಮೂಲನೆಯಾಗಿಲ್ಲ. ಈ ಕಾರಣದಿಂದಲೇ ಕೆಳವರ್ಗದವರ ಶೋಷಣೆ ಇನ್ನೂ ನಡೆಯುತ್ತಿದೆ. ಹಾಗಾದರೆ, ಅಂಬೇಡ್ಕರ್‌ರಂಥ ಧೀಮಂತರು ಮಾಡಿದ ಹೋರಾಟ, ಚಳವಳಿಗಳು ವ್ಯರ್ಥ ಎಂದು ಭಾವಿಸಬೇಕೇ?

-ಬಿ.ಎಸ್. ಚೈತ್ರ ಜಾಲಿಕಟ್ಟೆ

ನೈತಿಕ ಸ್ಥೈರ್ಯಕ್ಕೆ ಧಕ್ಕೆಯಾಗದೇ?

ದ್ವೇಷ ಭಾಷಣ ಕುರಿತ ಅನೇಕ ಮೊಕದ್ದಮೆಗಳನ್ನು ಹಿಂಪಡೆಯುವುದು ಸೂಕ್ತವಲ್ಲವೆಂಬ ಪೊಲೀಸ್, ಅಭಿಯೋಗ ಮತ್ತು ಕಾನೂನು ಇಲಾಖೆಗಳ ಅಭಿಪ್ರಾಯದ ಹೊರತಾಗಿಯೂ, ಸಚಿವ ಸಂಪುಟ ಸಮಿತಿಯ ಶಿಫಾರಸಿನ ಮೇಲೆ 34 ಮೊಕದ್ದಮೆಗಳನ್ನು ಹಿಂಪಡೆಯಲು ರಾಜ್ಯ ಸರಕಾರ ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಚುನಾವಣೆಯ ವೇಳೆ ನಡೆಯುವ ಘರ್ಷಣೆಗಳ ವಿಷಯದಲ್ಲಿ ಪಕ್ಷದ ಕಾರ್ಯಕರ್ತರು ಮತ್ತಿತರರ ಮೇಲೆ ದಾಖಲಾಗುವ ಮೊಕದ್ದಮೆಗಳನ್ನೂ ಹೀಗೇ ವಾಪಸ್ ಪಡೆದ ನಿದರ್ಶನಗಳಿವೆ. ಸರಕಾರಗಳು ರಾಜಕೀಯ ಕಾರಣಗಳಿಗಾಗಿ ಹೀಗೆ ಮೊಕದ್ದಮೆ ಹಿಂಪಡೆಯುವುದು ಹೊಸದೇನಲ್ಲ.

ಹೀಗಾದರೆ, ಕಾನೂನು ರೀತ್ಯಾ ಮೊಕದ್ದಮೆ ದಾಖಲಿಸಿ, ನ್ಯಾಯಾಲಯಗಳಲ್ಲಿ ಅವನ್ನು ಮುಂದುವರಿಸುತ್ತಿರುವ ಪೊಲೀಸರು ಮತ್ತು ಸಾರ್ವಜನಿಕ ಅಭಿಯೋಜಕರ ನೈತಿಕ ಸ್ಥೈರ್ಯಕ್ಕೆ ಧಕ್ಕೆಯಾಗುವುದಿಲ್ಲವೇ? ಒಂದೊಮ್ಮೆ, ಸಂದರ್ಭಾನುಸಾರ ಪ್ರಕರಣಗಳನ್ನು ದಾಖಲಿಸಿಲ್ಲದಿದ್ದರೆ, ಕರ್ತವ್ಯಚ್ಯುತಿ ಮತ್ತು ನಿಷ್ಕ್ರಿಯತೆಗೆ ಪೊಲೀಸರು ಸಾರ್ವಜನಿಕ ಟೀಕೆಗೆ ಒಳಗಾಗುತ್ತಿರಲಿಲ್ಲವೇ? ಇಂಥ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದರಿಂದ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ, ಸ್ವಾರ್ಥಕ್ಕಾಗಿ, ಸಮುದಾಯಗಳ ನಡುವೆ ದ್ವೇಷಾಸೂಯೆ ಮೂಡಿಸಿ, ಶಾಂತಿ ಸಾಮರಸ್ಯಕ್ಕೆ ಭಂಗ ತರುವವರಿಗೆ ಪರೋಕ್ಷವಾಗಿ ನೆರವಾದಂತಾಗುತ್ತದೆ, ಅಪರಾಧವೆಸಗಿ ಅರಗಿಸಿಕೊಳ್ಳಬಹುದೆಂಬ ಧೈರ್ಯವೊದಗುತ್ತದೆ.

ಒಮ್ಮೆ ದಾಖಲಾದ ಕ್ರಿಮಿನಲ್ ಮೊಕದ್ದಮೆಯನ್ನು ಹಿಂಪಡೆಯಲು ಸರಕಾರಗಳಿಗೆ 'ವಿವೇಚನಾ ಅಧಿಕಾರ' ಇರಬಾರದು; ನ್ಯಾಯಾಲಯದಲ್ಲಿಯೇ ಅದು ಅಂತಿಮವಾಗಿ ತೀರ್ಮಾನವಾಗಬೇಕು. ಅವಶ್ಯವೆನಿಸಿದರೆ, ಸಂಬಂಧಿತ ನಿಯಮಗಳಿಗೆ ತಿದ್ದುಪಡಿಯಾಗಬೇಕು. ತನ್ನ ಮುಂದಿರುವ ಪಿಐಎಲ್ ಒಂದರ ವಿಚಾರಣೆಯ ವೇಳೆ, ದ್ವೇಷ ಭಾಷಣದ ವಿಚಾರದಲ್ಲಿ ಮೂಕಪ್ರೇಕ್ಷಕನಂತೆ ಏಕೆ ವರ್ತಿಸುತ್ತಿದ್ದೀರೆಂದು ಕೇಂದ್ರ ಸರಕಾರವನ್ನು ಪ್ರಶ್ನಿಸಿರುವ ಸರ್ವೋಚ್ಚ ನ್ಯಾಯಾಲಯ, 'ದೇಶವನ್ನೇ ವಿಷಪೂರಿತಗೊಳಿಸುವ ದ್ವೇಷ ಭಾಷಣಕ್ಕೆ ಆಸ್ಪದ ನೀಡಲಾಗದು. ರಾಜಕೀಯ ಪಕ್ಷಗಳು ಬರುತ್ತವೆ ಹೋಗುತ್ತವೆ. ಆದರೆ ರಾಷ್ಟ್ರ ಮತ್ತು ಪತ್ರಿಕಾ ಸಂಸ್ಥೆಗಳು ಶಾಶ್ವತವಾಗಿ ಉಳಿಯುತ್ತವೆ. ನಮಗೆ ನಿಜವಾದ ಸ್ವಾತಂತ್ರ್ಯ ಬೇಕು. ಆ ನಿಟ್ಟಿನಲ್ಲಿ ಸರಕಾರವು ನಿರ್ದಿಷ್ಟ ನಿಲುವು ತಳೆಯಬೇಕು' ಎಂದಿರುವುದು ಸಮಯೋಚಿತ. ನ್ಯಾಯಾಲಯದ ಆತಂಕ ಮತ್ತು ಆಶಯವನ್ನರಿತು ನಡೆಯುವ ವಿವೇಕ ಮತ್ತು ಜವಾಬ್ದಾರಿ ಸರಕಾರಗಳಿಗೆ ಇರಬೇಕು. ಪಕ್ಷ ರಾಜಕಾರಣಕ್ಕಾಗಿ ರಾಜಕೀಯ ಹಿತಾಸಕ್ತಿ ಕಾಯ್ದುಕೊಳ್ಳುವುದು ಸರಕಾರಗಳಿಗೆ ಆದ್ಯತೆಯಾಗಬಾರದು.

-ಪಿ. ಸ್ವಾತಿ ಬೆಂಗಳೂರು